ಹೊರಡಲೇಬೇಕು, ಅಪ್ಪನನ್ನು ಕಂಡುಹಿಡಿಯಲೇಬೇಕು, ಎಲ್ಲಿಂದ ಆರಂಭಿಸಬೇಕು ಎಂಬ ಯೋಚನೆಯಲ್ಲೇ ನಾಲ್ಕು ದಿನಗಳು ಕಳೆದವು.

ಐದನೇ ದಿನ ಬೆಳಿಗ್ಗೆ ಅನಿರೀಕ್ಷಿತವಾಗಿ ಸುಕೃತಿ ಮತ್ತು ಕರುಣಾನಿಧಿಯ ಆಗಮನವಾಯಿತು. ಅವರನ್ನು ಕಂಡು ಅಭಿಗೆ ಪರಮಾಶ್ಚರ್ಯವಾಯಿತು. 'ಹೀಗೂ ಆಗುವುದೆ?' ಎಂಬ ಒಣ ಪ್ರಶ್ನೆ ಅವನ ಮನದಲ್ಲಿ ಮೂಡಿತು. ಏನಿದ್ದರೂ ಆ ಕುರಿತು ಕೇಳಬಾರದು, ಮಾತಾಡಬಾರದು ಎಂದುಕೊಂಡ. ಸುಕೃತಿ ಆಗಾಗ ಹಣಕ್ಕಾಗಿ ಪೀಡಿಸುತ್ತಿದ್ದುದರಿಂದ ಅಪ್ಪ ಸುಸ್ತಾಗಿ ಹಣ ಕಳಿಸುವುದನ್ನು ನಿಲ್ಲಿಸಿದ ಮೇಲೆ ಐದಾರು ವರ್ಷಗಳಿಂದ ಅಪ್ಪನ ಜೊತೆ ಸಂಪರ್ಕ ಕಡಿದುಹೋಗಿತ್ತು. ಈಗ ಬಂದಿರುವ ಉದ್ದೇಶವಾದರೂ ಏನಿರಬಹುದು ಎಂಬ ಯೋಚನೆ ಬಂತು. ಕರುಣಾನಿಧಿ ಮತ್ತು ಸುಕೃತಿ ಡೈವೋರ್ಸ್ ಆಗಿರುವುದನ್ನು ಸುಕೃತಿಯೇ ನನಗೆ ಹೇಳಿದ್ದಾಳೆ. ಹಾಗಿದ್ದರೂ ಜೊತೆಯಾಗಿ ಬಂದಿದ್ದಾರಲ್ಲಾ, ಯಾಕಾಗಿರಬಹುದು, ಅಪ್ಪನ ಮೇಲಿನ ಪ್ರೀತಿಯಿಂದಲ್ಲ ಉದ್ದೇಶ ಬೇರೇನೋ ಇದೆ ಎಂದನಿಸಿತು. ಯಾವುದು ಸತ್ಯ ಯಾವುದು ಸುಳ್ಳು ಎಂಬ ಪ್ರಶ್ನೆಯ ಜೊತೆಗೇ ಯಾವುದು ಏನಾದರೇನು, ತಿಳಿದುಕೊಂಡು ಏನಾಗಬೇಕಾಗಿದೆ ಎಂದು ಸುಮ್ಮನಿದ್ದುಬಿಟ್ಟ ಅಭಿ.

ಅಭಿ ಸುಕೃತಿ ಮತ್ತು ಕರುಣಾನಿಧಿಯ ಜೊತೆ ಮಾತಾಡುತ್ತಿದ್ದರೂ ಮಹಡಿ ಮೇಲಿದ್ದ ಅಮರೇಶ ಮತ್ತು ಸನ್ಮತಿ ಕೆಳಗೆ ಬರಲಿಲ್ಲ. ಕರುಣಾನಿಧಿಯ ಗಂಭೀರವಾದ ಮುಖಭಾವವನ್ನು ಕಂಡು ಇವನ ಜೊತೆ ಮಾತಾಡುವುದಾದರೂ ಹೇಗೆ, ಏನು ಮಾತಾಡುವುದು ಎಂದು ಯೋಚಿಸಿದ ಅಭಿ. ಮನುಷ್ಯ ಎಂದಾದ ಮೇಲೆ ಮಾತಾಡಲೇ ಬೇಕಲ್ಲ ಎಂದುಕೊಂಡು ಅಭಿ ತಮಿಳನಾದ ಕರುಣಾನಿಧಿಯೊಡನೆ ಇಂಗ್ಲಿಷಿನಲ್ಲಿ, 'ಎಲ್ಲಿಂದ ಬಂದಿರಿ? ವಿಶ್ರಾಂತಿ ಪಡೆಯಿರಿ. ಅಂದ ಹಾಗೆ ನಾಷ್ಟಾ ಆಗಿರಲಿಕ್ಕಿಲ್ಲ ಅಲ್ವಾ?' ಎಂದ ಅಭಿ. 'ಇಲ್ಲ' ಎಂದಳು ಸುಕೃತಿ ಉತ್ಸಾಹರಹಿತಳಾಗಿ.

'ಒಳಗೆ ಬಂದು ಕುಳಿತುಕೊಳ್ಳಿ, ನಾಷ್ಟಾದ ವ್ಯವಸ್ಥೆ ಮಾಡಿ ಬರ್ತೀನಿ' ಎಂದು ಹೇಳಿ ಮಹಡಿ ಮೇಲೆ ಹೋದಾಗ ಅಭಿ ಕಂಡ ದೃಶ್ಯ ಅವನನ್ನು ದಂಗಾಗಿಸಿತು. ಮಂಚದಲ್ಲಿ ಅಮರೇಶ ಮತ್ತು ಸನ್ಮತಿ ಒಬ್ಬರನ್ನೊಬ್ಬರು ಅಪ್ಪಿಕೊಂಡು ಮಲಗಿದ್ದರು. ಅಣ್ಣ ತಂಗಿ ಹೀಗೆ ಮಲಗುವರೆ ಎಂಬ ಅಚ್ಚರಿ ಕೂಡ ಉಂಟಾಯಿತು ಅಭಿಗೆ. ಮೈಮೇಲೆ ಸರಿಯಾಗಿ ಮೈಮುಚ್ಚುವಂತೆ ಬಟ್ಟೆ ಇಬ್ಬರ ಮೇಲೆಯೂ ಇರಲಿಲ್ಲ. ಏನು ಮಾಡುವುದು ಎಂದು ತಿಳಿಯದೆ ಸ್ವಲ್ಪ ಹೊತ್ತು ಹಾಗೆಯೇ ನಿಂತ. ಇವರನ್ನು ಎಚ್ಚರಿಸದೆ ಬೇರೆ ವಿಧಿಯಿಲ್ಲ ಎನಿಸಿ ಅಭಿ ಜೋರಾಗಿ ಕೆಮ್ಮಿದ. ಅಮರೇಶ ಮತ್ತು ಸನ್ಮತಿ ಗಡಬಡಿಸಿ ಎದ್ದರು. ಮಾತು ಆಡದೆ ಮೈಮೇಲಿನ ಉಡುಪು ಸರಿಮಾಡಿಕೊಂಡರು.

'ಕೆಳಗೆ ಬನ್ನಿ. ನನ್ನ ತಂಗಿ ಸುಕೃತಿ ಗಂಡನ ಜೊತೆ ಬಂದಿದ್ದಾಳೆ' ಎಂದ ಅಭಿ. ಏನೂ ಹೇಳದೆ, ಅಮರೇಶ ಮತ್ತು ಸನ್ಮತಿ ಮಹಡಿಯ ಮೆಟ್ಟಲಿಳಿದರು. ಬಂದವರನ್ನು ಕಂಡಂತೆ ಮಾಡಿ ಭಾವರಹಿತರಾಗಿ ಅವರಿಗೆ ಸರಿಯಾಗಿ ಮುಖ ಸಹ ತೋರಿಸದೆ ಇಬ್ಬರೂ ಅಡುಗೆ ಕೋಣೆಗೆ ಹೋದರು. ಇದೆಂಥ ನಡವಳಿಕೆ ಎಂದು ಅಭಿಗೆ ಆಶ್ಚರ್ಯವಾಯಿತು.

ಭರ್ತಿ ಒಂದು ಗಂಟೆಯ ನಂತರ ಅಮರೇಶ ಮತ್ತು ಸನ್ಮತಿ ವಿನಯವೇ ಮೂರ್ತಿವೆತ್ತಂತೆ ಅಡುಗೆ ಕೋಣೆಯಿಂದೀಚೆಗೆ ಬಂದು ನಯವಾಗಿ, ನಗುಮುಖದಿಂದ, 'ಬನ್ನಿ ನಾಷ್ಟಾ ಸಿದ್ಧವಾಗಿದೆ' ಎಂದು ಜೊತೆಯಾಗಿ ಹೇಳಿದ್ದು ಹಾಡಿನ ತುಣುಕಿನಂತೆ ಇತ್ತು.

ಅಮರೇಶ ಹಸನ್ಮುಖಿಯಾಗಿದ್ದ. ಸನ್ಮತಿಯ ಮುಖ ಹಾವಭಾವದಲ್ಲಿ ಪ್ರೀತಿ ಆದರ ತುಂಬಿ ತುಳುಕುತ್ತಿತ್ತು. ಅವರ ನಡೆನುಡಿ ಪ್ರತಿಶತ ನಾಟಕೀಯವಾಗಿ ಕಾಣಿಸಿತು ಅಭಿಗೆ.

27

ನಾಷ್ಟಾ ಆಗಿ ಐದು ನಿಮಿಷದ ಬಳಿಕ ಅಭಿ, 'ಮಗಳು ಎಲ್ಲಿದ್ದಾಳೆ ಸುಕೃತಿ? ಯಾಕೆ ಕರೆದುಕೊಂಡು ಬರಲಿಲ್ಲ?' ಎಂದು ಕೇಳಿದ.

'ಅವಳಿಗೆ ಈಗ ವರ್ಷದ ಪರೀಕ್ಷೆ' ಎಂದಳು ಸುಕೃತಿ.

'ಯಾವ ಕ್ಲಾಸು?' ಸನ್ಮತಿ ಕೇಳಿದಳು.

ಸುಕೃತಿಯ ಮಗಳು ಸುನೀತಿ ಐದನೇ ತರಗತಿಯಲ್ಲಿ ಓದುತ್ತಿದ್ದಳು.

'ಇಂಜಿನಿಯರಿಂಗ್ ಕೊನೆಯ ವರ್ಷ' ಎಂದು ಎರಚು ಮಾತಿನಲ್ಲಿ ಹೇಳಿದಳು ಸುಕೃತಿ. ಅಮರೇಶ ಮತ್ತು ಸನ್ಮತಿ ಕ್ಷಣ ಕಾಲ ಮುಖ ಮುಖ ನೋಡಿಕೊಂಡರು. ಮಾತು ಮುಂದರಿಯುವ ಯಾವ ಲಕ್ಷಣವೂ ಕಾಣಿಸಲಿಲ್ಲ. ಸುಕೃತಿ ಈ ರೀತಿ ಮಾತಾಡುವುದನ್ನು ಯಾವಾಗ ಅಭ್ಯಾಸ ಮಾಡಿಕೊಂಡಳು, ಇವಳ ಜೊತೆ ಮಾತಾಡುವುದಾರೂ ಹೇಗೆ ಎಂಬ ಯೋಚನೆಯಲ್ಲಿದ್ದ ಅಭಿ.

'ಅಪ್ಪ ಎಲ್ಲಿದ್ದಾರೆ?' ಏರಿದ ದನಿಯಲ್ಲಿ ಕೇಳಿದಳು ಸುಕೃತಿ.

'ಯಾರ ಅಪ್ಪ?' ಎಂದು ಸನ್ಮತಿ ಕೇಳಿದಳು.

'ನಿನ್ನ ಅಪ್ಪ ಅಲ್ಲ. ನನ್ನ ಅಪ್ಪ' ಸುಕೃತಿಯೆಂದಳು.

ಆಯ್ತು, ಇನ್ನು ಇವರು ಏನು ಮಾತಾಡಿದರೂ ಅದು ಈ ಧಾಟಿಯಲ್ಲೇ ಇರುತ್ತದೆ ಎಂದುಕೊಂಡ ಅಭಿಗೆ ಯಾಕೋ ಇಬ್ಬರದೂ ತಲೆ ಕೆಟ್ಟಿದೆ ಎಂದನಿಸಿತು.

'ನಿನ್ನ ಅಪ್ಪ ಸತ್ತದ್ದು ನಿಂಗೆ ಗೊತ್ತಾಗಿಲ್ವ?' ಸನ್ಮತಿ ಕೇಳಿದಳು.

ಈ ಸಂಭಾಷಣೆ ಇನ್ನು ವಿಕೋಪಕ್ಕೆ ತಿರುಗುತ್ತದೆ ಎಂದನಿಸಿತು ಅಭಿಗೆ.

'ಗೊತ್ತಾಗ್ಲಿಲ್ಲ, ಯಾವಾಗ?' ಸುಕೃತಿ ತಣ್ಣಗೆ ಮಾತಾಡಿದಳು.

'ಅದೂ ಗೊತ್ತಿಲ್ವ, ಹಾಗಾದ್ರೆ ಅದು ನಿನ್ನ ಅಪ್ಪ ಅಲ್ಲ' ಸನ್ಮತಿಯೆಂದಳು.

ಸುಕೃತಿ ಕರುಣಾನಿಧಿಯ ಕಿವಿಯಲ್ಲಿ ಇಂಗ್ಲಿಷಿನಲ್ಲಿ 'ಇವಳಿಗೆ ತಲೆ ಸರಿಯಿಲ್ಲ ಅಂತ ಕಾಣುತ್ತೆ' ಎಂದು ಸನ್ಮತಿಗೆ ಕೇಳಿಸುವಂತೆಯೇ ನುಡಿದಳು.

'ಇಂಗ್ಲಿಷಿನಲ್ಲಿ ಏನು ಬೊಗಳಿದೆ? ನಂಗೆ ಇಂಗ್ಲಿಷ್ ಅರ್ಥವಾಗ್ತದೆ' ಎಂದಳು ಸನ್ಮತಿ.

'ನಿಂಗೆ ಅರ್ಥವಾದ್ರೆ ಏನು? ಭೂಮಿ ನಡುಗುತ್ತೆ' ಸುಕೃತಿಯೆಂದಳು.

'ಹೌದು. ಭೂಮಿ ಮಾತ್ರ ಅಲ್ಲ, ಪಾತಾಳ ಕೂಡ ನಡುಗುತ್ತದೆ' ಸನ್ಮತಿಯೆಂದಳು.

ಹುಚ್ಚಾಸ್ಪತ್ರೆಯಲ್ಲಿರುವಂತಾಗುತ್ತಿದೆಯಲ್ಲಾ, ಇವರು ಯಾವ ಯುಗದ ವಿದ್ಯಾವಂತೆಯರು ಎಂದು ವಿಸ್ಮಿತನಾದ ಅಭಿ ಏನು ಮಾಡುವುದು ಎಂದು ತಿಳಿಯದೆ ಎದ್ದು ಹೊರಗೆ ಹೋಗಿ ಅಂಗಳದ ಅಂಚಿನಲ್ಲಿದ್ದ ಮರದಡಿಯಲ್ಲಿ ಕುಳಿತ.

ಅನಂತರ ಸನ್ಮತಿ ಮತ್ತು ಸುಕೃತಿಯ ನಡುವೆ ಅವಾಚ್ಯವಾದ, ಅಸಹ್ಯಕರವಾದ ಶಬ್ದಗಳಲ್ಲಿ ವಾಕ್ಕಲಹ ಮುಂದರಿಯಿತು. ಇವಳು ಅವಳ ಗಂಡನಿಗೆ ಇಲ್ಲದ ರೋಗಗಳನ್ನೆಲ್ಲ ಕೊಟ್ಟಳು, ಅವಳು ಇವಳ ಗಂಡನನ್ನು ಜೀವಂತ ಸುಟ್ಟು ಬೂದಿ ಮಾಡಿದಳು.

ವಾಸ್ತವದಲ್ಲಿ, ಇಬ್ಬರಿಗೂ 'ಗಂಡ' ಎಂಬಂಥ ಗಂಡ ಇರಲಿಲ್ಲ. ಆದ್ದರಿಂದ ಗಂಡನನ್ನು ಏನು ಮಾಡುವುದೂ ಸಾಧ್ಯವಿತ್ತು. ಅವರ ಮಾತನ್ನು ಕೇಳಿಸಿಕೊಂಡ ದೇವರು ನಾನು ಮನುಷ್ಯನಿಗೆ ನಾಲಿಗೆ ಮತ್ತು ಭಾಷೆಯನ್ನು ಯಾಕೆ ಕೊಟ್ಟೆನೊ ಎಂದು ಹಣೆಹಣೆ ಬಡಿದುಕೊಂಡ.

ಅಮರೇಶ ಧ್ಯಾನಮಗ್ನನಾಗಿರುವಂತೆ ಮಿಸುಕಾಡದೆ ಕುಳಿತೇ ಇದ್ದ. ಅನಂತರ ಅದೇಕೋ ಸ್ವಲ್ಪ ಹೊತ್ತು ಇಬ್ಬರೂ ಸುಮ್ಮನಾದರು. ಅನಂತರ ಗರಿಗೆದರಿದ ಡೇಗೆಗಳಂತೆ ಸುಮಾರು ಅರ್ಧ ಗಂಟೆ ಸನ್ಮತಿ ಮತ್ತು ಸುಕೃತಿ ಒಬ್ಬರನ್ನೊಬ್ಬರು ವಾಚಾಮಗೋಚರವಾಗಿ ಸ್ತುತಿಸಿದರು. ಆ ಸ್ತುತಿಯಲ್ಲಿ ಒಬ್ಬರಿನ್ನೊಬ್ಬರ ಬಾಳಿನಲ್ಲಿ ನಡೆದುದನ್ನು ಮತ್ತು ನಡೆಯದುದನ್ನು ಜೋಡಿಸಿ ಅವರ ಆತ್ಮಕತೆಯನ್ನು ನಾಲಿಗೆಯಲ್ಲೇ ಬರೆದರು. ಆದರೆ ಈರ್ವರೊಳಗೂ ದ್ವೇಷದ ಲಾವಾರಸ ಕುದಿಯುತ್ತಿತ್ತು. ಕುಳಿತಲ್ಲಿಂದ ತಟ್ಟನೆ ಎದ್ದು,

'ನೀನು ಬಂದಿರುವುದಾರೂ ಯಾಕೆ ಎಂದು ಹೇಳಿ ತೊಲಗು' ಎಂದು ಅಬ್ಬರಿಸಿದಳು. ಸನ್ಮತಿ.

'ನೀನು ಹೇಗೆ ಇಲ್ಲಿರುವೆ ಎಂದು ಮೊದಲು ಬೊಗಳು. ಬೊಗಳಿದರೂ ಬೊಗಳದಿದ್ದರೂ ನಿನ್ನನ್ನು ಮನೆಯಿಂದ ಹೊರಗೆ ಹಾಕಿ ಬಾಗಿಲು ಬಂದ್ ಮಾಡಿ ಬೀಗ ಜಡಿದೇ ನಾನು ಹೋಗುವುದು' ಎಂದಳು ಸುಕೃತಿ.

'ಹೋಗಿ ಯಾವ ಹೊಂಡದಲ್ಲಿ ಬೇಕಾದರೂ ಬೀಳು. ಮನೆಯ ಬೀಗದ ಕೈ ನನ್ನ ಬಳಿಯಲ್ಲಿದೆ. ಮನೆಯೂ ನನ್ನ ವಶದಲ್ಲಿದೆ' ಎಂದಳು ಸನ್ಮತಿ.

'ಕೊಡು ಬೀಗದ ಕೈ' ಎಂದು ಸುಕೃತಿ ಎದ್ದು ಬಂದು ಸನ್ಮತಿಯ ಮುಡಿಯನ್ನು ಹಿಡಿದು ಎರಡು ಕೆನ್ನೆಗೂ ಹೊಡೆದು ತಳ್ಳಿ ಕೆಳ ಬೀಳಿಸಿದಳು. ಕೂಡಲೇ ಎದ್ದ ಸನ್ಮತಿ ಸುಕೃತಿಯ ಕತ್ತಿಗೆ ಕೈ ಹಾಕಿ ಒತ್ತಿ ಹಿಡಿದಳು. 'ಅಣ್ಣಾ, ಇವಳು ನನ್ನನ್ನು ಕೊಲ್ಲುತ್ತಿದ್ದಾಳೆ ಬೇಗ ಬಾ' ಎಂದು ಜೋರಾಗಿ ಅರಚಿದಳು ಸುಕೃತಿ. ಅಮರೇಶ ಹಾಗೆಯೇ ಅಲುಗಾಡದೆ ಕುಳಿತಿದ್ದ.

(ಸಶೇಷ)